# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 02.02.2019 ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ 50ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎಂ.ಎಸ್. ರಮಾನಂದ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್.**<br>ನಿರ್ದೇಶಕರು – ಐ.ಟಿ. | **ಡಾ. ಸೆಲ್ವಪಿಳ್ಳೆ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

ಕುಲಸಚಿವರು

ಕುಲಪತಿಗಳು

2/2

ವಿಷಯ ಸಂಖ್ಯೆ : 50:01

**ವಿಷಯ :** 2018–19ನೇ ಶೈಕ್ಷಣಿಕ ವರ್ಷದ ಬಿ.ಇಡಿ. CET ಪರೀಕ್ಷೆಗೆ ಸಂಬಂಧಪಟ್ಟಂತೆ ಆಯ್ಕೆ ಸಮಿತಿಯ ಶಿಫಾರಸ್ಸುಗಳ ಅನುಮೋದನೆಗಾಗಿ.

*****

2018–19 ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಸಿ.ಇ.ಟಿ ಪರೀಕ್ಷೆಗೆ ಸಂಬಂಧಪಟ್ಟಂತೆ ದಿನಾಂಕ: 30.1.2019 ರಂದು ನಡೆದ ಆಯ್ಕೆ ಸಮಿತಿ ಸಭೆಯು ಮಾಡಿರುವ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದೆ.

1. ಮೀಸಲಾತಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ನಿಯಮಗಳನ್ನು ಯಥವತ್ತಾಗಿ ಪಾಲಿಸುವುದು.

2. ಸಮನಾಂತರ ಮೀಸಲಾತಿಗೆ (horizontal reservation) ಸಂಬಂಧಿಸಿದಂತೆ ಹೆಚ್ಚಿನ ತಿಳುವಳಿಕೆ ಪಡೆಯಲು ತಜ್ಞರ ನೆರವನ್ನು ಪಡೆಯುವ ಸಂಬಂಧ ಮಾನ್ಯ ಕುಲಪತಿಗಳನ್ನು ಕೋರುವಂತೆ ಶಿಫಾರಸ್ಸು ಮಾಡಲಾಯಿತು. ಸಮನಾಂತರ ಮೀಸಲಾತಿ ವಿಷಯದ ಬಗ್ಗೆ ತಜ್ಞರು ನೀಡುವ ಸಲಹೆ/ಸೂಚನೆಗಳನ್ನು ಅಳವಡಿಸಿಕೊಳ್ಳುವುದು.

3. ದಿನಾಂಕ: 11.2.2019 ರಂದು ಸಿ.ಇ.ಟಿ key answers ಅನ್ನು ಕರಾಮುವಿ ಅಂತರ್ಜಾಲ ತಾಣದಲ್ಲಿ ಪ್ರಕಟಿಸಿ, ಅಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳಲ್ಲಿ ಸಲ್ಲಿಸಲು, ಮೂರು ದಿನಗಳ ಗಡುವನ್ನು ನೀಡುವಂತೆಯೂ ಹಾಗೂ ಬಿ.ಓ.ಇ ಸಮಿತಿಯು ಇಂತಹ ಅಕ್ಷೇಪಣೆಗಳಿಗೆ ಸಮಜಾಯಿಷಿ ಉತ್ತರಗಳನ್ನು ನಿಗದಿಪಡಿಸಿ ವಿವಿಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸುವುದು.

4. ನಂತರದಲ್ಲಿ ಆಯ್ಕೆ ಸಮಿತಿಯು ಸಭೆ ಸೇರಿ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಮಾನದಂಡಕ್ಕೆ ಅನುಸಾರವಾಗಿ ಪ್ರವೇಶಾತಿ/ಸಮಾಲೋಚನೆಗೆ ಆಹ್ವಾನಿಸಬೇಕಾಗಿರುವ ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ 1:2 ಅನುಪಾತದಲ್ಲಿ ಆಯ್ಕೆ ಮಾಡುವುದು.

5. ಸಮಾಲೋಚನೆ ಪ್ರಕ್ರಿಯೆಗೆ (merit cum reservation) 1:2 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಆಹ್ವಾನಿಸುವುದು.

6. ಅಧ್ಯಯನ ಕೇಂದ್ರ ಆಯ್ಕೆ ಮಾಡುವ ಸಂದರ್ಭದಲ್ಲಿ ಸಮಾಲೋಚನೆಗೆ ಬಂದ ದಿನದಂದು ಲಭ್ಯವಿರುವ ಕೇಂದ್ರಗಳನ್ನು ಸಿ.ಇ.ಟಿ ಜೇಷ್ಠತೆ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ ವಿಶೇಷ ಚೇತನ ಅಭ್ಯರ್ಥಿಗಳಿದ್ದಲ್ಲಿ, ವಿಶೇಷ ಪ್ರಕರಣವೆಂದು ಪರಿಗಣಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸುವುದು.

ಕುಲಸಚಿವರು

ಕುಲಪತಿಗಳು 2/2

7. ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲೂ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಏನಾದರೂ ಸಮಸ್ಯೆಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ಕುಲಸಚಿವರು ಇಂತಹ ಪ್ರಕರಣಗಳನ್ನು ನಿರ್ವಹಿಸುವರು.
8. ಸಿ.ಇ.ಟಿ. ಗೆ ಹಾಜರಾದ ಅಭ್ಯರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ horizontal reservation, 1:2 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಪ್ರವೇಶಾತಿ ಪ್ರಕ್ರಿಯೆಗೆ ಆಹ್ವಾನಿಸುವುದು.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಹಾಗು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಕೋರಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ : ಬಿ.ಇಡಿ., ಸಿ.ಇ.ಟಿ. ನಂತರ ಪ್ರವೇಶಾತಿ ಪ್ರಕ್ರಿಯೆ ಸುಗಮಗೊಳಿಸುವ ಉದ್ದೇಶದಿಂದ ಸಮಿತಿಯ ಈ ಮೇಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಅನುಮೋದಿಸಿತು.**

-----

**ವಿಷಯ ಸಂಖ್ಯೆ : 50:02**

**ವಿಷಯ :** Appeal of KSOU for Master of Law disposed off by the UGC reference Letter No. F.No.14-5/2018 (DEB-I) dated: 24th Jan 2019.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು Master of Law ಕೋರ್ಸ್‌ನ್ನು ಯುಜಿಸಿ ಯಿಂದ ಮಾನ್ಯತೆ ಪಡೆಯಲು. ಯುಜಿಸಿ ದೂರಶಿಕ್ಷಣ ನಿಯಮ – 2017ರ ಪ್ರಕಾರ ಮೇಲ್ಮನವಿ ಮಾಡಿತ್ತು. ಯುಜಿಸಿ ಮೇಲ್ಮನವಿ ಪ್ರಾಧಿಕಾರದ ಸಮಿತಿಯ ಮುಂದೆ ದಿನಾಂಕ: 10-12-2018 ರಂದು ಪರಿಶೀಲಿಸಲಾಯಿತು. ಯುಜಿಸಿ ಮೇಲ್ಮನವಿ ಪ್ರಾಧಿಕಾರವು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Master of Law ಕೋರ್ಸ್‌ಗೆ ನಿಯಂತ್ರಣ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿಲ್ಲ ಎಂಬ ಕಾರಣ ನೀಡಿ ವಿ.ವಿ. ಮನವಿಯನ್ನು ವಜಾ ಮಾಡಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ.

**ತೀರ್ಮಾನ : ಯುಜಿಸಿ ಮೇಲ್ಮನವಿಯ ತೀರ್ಮಾನವನ್ನು ಶೈಕ್ಷಣಿಕ ಮಂಡಳಿಯು ಗಮನಿಸಿತು. ಯುಜಿಸಿ ನಿಯಮದಂತೆ Master of Law ಕೋರ್ಸ್‌ಗೆ ಮಾನ್ಯತೆ ಪಡೆಯುವ ಸಂಬಂಧ Bar council of India ಇವರಿಗೆ ಮನವಿಯನ್ನು ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿತು.**

-----

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ : 50:03

**ವಿಷಯ :** ಕರಾಮುವಿಯಲ್ಲಿ 2012-13ರ ಶೈಕ್ಷಣಿಕ ಸಾಲು ಮತ್ತು ಅದರ ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಇನ್‌ಹೌಸ್‌ನಲ್ಲಿ ಪ್ರವೇಶಾತಿ ಪಡೆದು ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ 16ನೇ ವಾರ್ಷಿಕ ಘಟಕೋತ್ಸವವನ್ನು ನಡೆಸಲು ವಿದ್ಯಾರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಬಗೆಗೆ.

*****

ಅಧಿಸೂಚನೆ ಸಂಖ್ಯೆ ಕರಾಮುವಿ/ಪವಿ/ಘವಿ/501/2015-16, ದಿನಾಂಕ: 27.01.2016ರ ಅಧಿಸೂಚನೆ ಪ್ರಕಾರ 16ನೇ ಘಟಿಕೋತ್ಸವವನ್ನು ನಡೆಸಲು ಈ ಹಿಂದೆ ತೀರ್ಮಾನಿಸಲಾಗಿತ್ತು. ಅದರೆ, 2013-14ರಿಂದ ವಿವಿನಿಲಯದ ಶಿಕ್ಷಣಕ್ರಮಗಳ ಯುಜಿಸಿ ಮಾನ್ಯತೆ ತಡೆಹಿಡಿದಿರುವ ಹಿನ್ನೆಲೆಯಲ್ಲಿ ಈ ಅಧಿಸೂಚನೆಯ ಘಟಿಕೋತ್ಸವ ನಡೆಸಿರುವುದಿಲ್ಲ. ಈ ಅಧಿಸೂಚನೆ ಅನುಗುಣವಾಗಿ ಒಟ್ಟು 8324 ಅರ್ಜಿಗಳು ಸ್ವೀಕೃತವಾಗಿದ್ದವು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2013ರ ಪೂರ್ವದಲ್ಲಿ ಪ್ರವೇಶಾತಿ ಪಡೆದು ಉತ್ತೀರ್ಣರಾಗಿ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳನ್ನು ಪಡೆಯಧೆ ಇರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ/ಅಂಕಪಟ್ಟಿಗಳನ್ನು ವಿತರಿಸಲು ಹಾಗೂ ತಾಂತ್ರಿಕೇತರ ಕೋರ್ಸ್‌ಗಳಲ್ಲಿ (non-technical courses) ಹಲವು ಬ್ಯಾಚ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹಾಗೂ ಕೋರ್ಸ್‌ಗಳನ್ನು ಅಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೂ ಸಹ ವ್ಯಾಸಂಗ ಮುಂದುವರಿಸಲು ಹಾಗೂ ಪದವಿ ಪ್ರಮಾಣಪತ್ರಗಳನ್ನು ವಿತರಿಸಲು ಪರಿನಿಯಮಾವಳಿ ಅನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅಗತ್ಯ ಕ್ರಮವಹಿಸಲು ಆದೇಶಿಸಿದೆ.

ಪ್ರಸ್ತುತ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣಕ್ರಮಗಳಿಗೆ 2012-2013ನೇ ಶೈಕ್ಷಣಿಕ ಸಾಲು ಮತ್ತು ಅದರ ಹಿಂದಿನ ಶೈಕ್ಷಣಿಕ ಸಾಲುಗಳಿಗೆ ಯುಜಿಸಿ ಮಾನ್ಯತೆ ಇರುವ ಹಿನ್ನೆಲೆಯಲ್ಲಿ ಸದರಿ ಶೈಕ್ಷಣಿಕ ಸಾಲುಗಳಲ್ಲಿ ಇನ್‌ಹೌಸ್‌ನಲ್ಲಿ ಪ್ರವೇಶಾತಿ ಹೊಂದಿ ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ಘಟಿಕೋತ್ಸವವನ್ನು ನಡೆಸಿ ಪದವಿ ಪ್ರಮಾಣ ಪತ್ರಗಳನ್ನು ನೀಡಬೇಕಾಗಿದೆ. ವಿಶ್ವವಿದ್ಯಾನಿಲಯದ ಪರೀಕ್ಷಾ ಪ್ರಕ್ರಿಯೆಯನ್ನು ನಡೆಸುತ್ತಿದ್ದ ಖಾಸಗಿ ಸಂಸ್ಥೆಯಾದ ಮೆ. ಐಇಎಂ ಸಂಸ್ಥೆರವರು 2012-13 ಮತ್ತು ಅದರ ಹಿಂದಿನ ಶೈಕ್ಷಣಿಕ ಸಾಲುಗಳ ವಿದ್ಯಾರ್ಥಿಗಳು 2017 ಫೆಬ್ರವರಿ / ಮಾರ್ಚ್ ಮಾಹೆಯವರೆವಿಗೂ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿರುವವರರನ್ನು ಪರಿಶೀಲಿಸಿ ನೀಡಿರುವ ದತ್ತಾಂಶದ ಪ್ರಕಾರ ಪ್ರಸ್ತುತ, ಉದ್ದೇಶಿಸಿರುವ ಘಟಿಕೋತ್ಸವಕ್ಕೆ ಒಟ್ಟು 17502 ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ. **ಈ ವಿದ್ಯಾರ್ಥಿಗಳಲ್ಲಿ ಪ್ರಸ್ತುತದವರವಿಗೂ ಅರ್ಹ 2067 ವಿದ್ಯಾರ್ಥಿಗಳು ಘಟಿಕೋತ್ಸವಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.** (ಈ ಹಿಂದೆ ಸ್ವೀಕೃತವಾಗಿದ್ದ 8324ರ ಅರ್ಜಿಗಳಲ್ಲಿ ಪ್ರತ್ಯೇಕಿಸಿರುವ ಅರ್ಜಿಗಳ ಬಗೆಗಿನ ಮಾಹಿತಿಯನ್ನು ಅನುಬಂಧ – ಅ ರಲ್ಲಿ ಲಗತ್ತಿಸಿದೆ).

ಕುಲಸಚಿವರು

ಕುಲಪತಿಗಳು

| 27.01.2016ರ ಅಧಿಸೂಚನೆಗೆ ಅನುಗುಣವಾಗಿ ಸ್ವೀಕೃತವಾಗಿರುವ ಒಟ್ಟು ಅರ್ಜಿಗಳ ಸಂಖ್ಯೆ – 8324 | | | |
|---|---|---|---|
| 2012-13 ಮತ್ತು ಅದರ ಹಿಂದಿನ ಸಾಲುಗಳ ಇನ್‌ಹೌಸ್ ವಿದ್ಯಾರ್ಥಿಗಳ ಸಂಖ್ಯೆ | 2067 | 1. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು<br>2. ಸ್ನಾತಕ ಪದವಿ ವಿದ್ಯಾರ್ಥಿಗಳು<br>3. ಡಿಪ್ಲೋಮಾ ವಿದ್ಯಾರ್ಥಿಗಳು | 437<br>1630<br>-- |
| 2013-14ರ ಶೈಕ್ಷಣಿಕ ಸಾಲಿನ ಇನ್‌ಹೌಸ್ ವಿದ್ಯಾರ್ಥಿಗಳ ಸಂಖ್ಯೆ | 6257 | 1. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು<br>2. ಸ್ನಾತಕ ಪದವಿ ವಿದ್ಯಾರ್ಥಿಗಳು<br>3. ಡಿಪ್ಲೋಮಾ ವಿದ್ಯಾರ್ಥಿಗಳು | 6145<br>83<br>29 |

ಸದರಿ 2067 ವಿವಿಧ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳಲ್ಲಿ Distinction - 90 ವಿದ್ಯಾರ್ಥಿಗಳು ಹಾಗು First Class - 667 ವಿದ್ಯಾರ್ಥಿಗಳು, **ಒಟ್ಟು – 757 ವಿದ್ಯಾರ್ಥಿಗಳು** ಸೇರಿರುತ್ತಾರೆ. ಸದರಿ ಅಂಶಗಳನ್ನು ಅವಗಾಹನೆಗೆ ತರಲಾಗಿದೆ. ಸದರಿ ವಿಷಯವನ್ನು 50ನೇ ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ, ನಿರ್ಣಯಕ್ಕಾಗಿ ಮತ್ತು ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ :** **ವಿಷಯಕ್ಕೆ 50:03 ರ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿತು. ಅದರಂತೆ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.**

- **2012-13 ಮತ್ತು ಅದರ ಹಿಂದಿನ ಸಾಲುಗಳ ಇನ್‌ಹೌಸ್‌ನ ವಿದ್ಯಾರ್ಥಿಗಳ ಪಟ್ಟಿ (Candidate list) ಯನ್ನು 16ನೇ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅನುಮೋದಿಸಲಾಯಿತು.**
- **16ನೇ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಘಟಿಕೋತ್ಸವಕ್ಕೆ ಹಾಜರಾಗಲು ಅವಕಾಶ ಮಾಡಿಕೊಡಬೇಕು ಎಂದು ನಿರ್ಣಯಿಸಲಾಯಿತು.**
- **16ನೇ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಚಿನ್ನದ ಪದಕ/ನಗದು ಬಹುಮಾನ ಪಡೆಯಲು ಅರ್ಹರಾದ ವಿದ್ಯಾರ್ಥಿಗಳನ್ನು ವೇದಿಕೆಗೆ ಆಹ್ವಾನಿಸಿ ಪದವಿ/ಪದಕ/ಬಹುಮಾನ ಇವುಗಳನ್ನು ಗಣ್ಯರಿಂದ ಪ್ರಧಾನ ಮಾಡಿಸುವಂತೆ ನಿರ್ಣಯಿಸಲಾಯಿತು.**

-----

ಅಂತಿಮವಾಗಿ 50ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗೂ ಅಧ್ಯಕ್ಷರು**